Reg. No. : ....................................

Name : .......................................

**FY-06**

**FIRST YEAR HIGHER SECONDARY EXAMINATION, JUNE 2022**

Part – II

**KANNADA**

Maximum : 80 Scores

Time : **2½** Hours

Cool-off time : **15** Minutes

**ವಿದ್ಯಾರ್ಥಿಗಳಿಗೆ ಸೂಚನೆಗಳು :**

- ಮೊದಲ **15** ನಿಮಿಷ 'ಕೂಲ್ ಆಫ್ ಸಮಯ' ವಾಗಿದೆ. ಪ್ರಶ್ನೆಗಳನ್ನು ಓದಿ ಅರ್ಥೈಸಿಕೊಳ್ಳುವುದಕ್ಕೂ ಉತ್ತರಗಳ ಬಗ್ಗೆ ಯೋಚಿಸುವುದಕ್ಕೂ ಈ ಸಮಯವನ್ನು ಬಳಸಿಕೊಳ್ಳಬಹುದು.
- ಪ್ರಶ್ನೆಗಳನ್ನು ಮತ್ತು ಸೂಚನೆಗಳನ್ನು ಸರಿಯಾಗಿ ಓದಿ ಅರ್ಥೈಸಿಕೊಂಡ ಮೇಲೆ ಉತ್ತರ ಬರೆಯಿರಿ.
- ಉತ್ತರ ಬರೆಯುವಾಗ ಅಂಕ, ಸಮಯ ಮೊದಲಾದವುಗಳನ್ನು ಪರಿಗಣಿಸಬೇಕು.
- ಕೊಟ್ಟಿರುವ ಸೂಚನೆಗಳನ್ನು ಗಮನವಿಟ್ಟು ಓದಿರಿ.

**1 ರಿಂದ 4 ರವರೆಗಿನ ಪ್ರಶ್ನೆಗಳಿಗೆ ಸರಿಯಾದ ಉತ್ತರವನ್ನು ಆವರಣದಿಂದ ಆರಿಸಿ ಬರೆಯಿರಿ. (4 × 1 = 4)**

1. ಬ್ಲೆನ್ ಹೀಮ್ ಕದನ ಕವನವನ್ನು ಬರೆದ ಕವಿ ಯಾರು ?
   (ದ.ರಾ. ಬೇಂದ್ರೆ, ಬಿ.ಎಂ. ಶ್ರೀ., ಕುವೆಂಪು, ಡಿ.ವಿ.ಜಿ.)

2. ಬಸವಣ್ಣನವರ ವಚನಗಳ ಅಂಕಿತ ಯಾವುದು ?
   (ಗುಹೇಶ್ವರ, ಚೆನ್ನಮಲ್ಲಿಕಾರ್ಜುನ, ಕೂಡಲಸಂಗಮದೇವ, ರಾಮನಾಥ)

3. 'ಬಂಡನುಂಡು ದುಂಬಿವಿಂಡು ಹಾಡುತಿಹವು ಹಾರುತ' – ಎನ್ನುವ ಸಾಲು ಯಾವ ಕವನದಲ್ಲಿ ಕಾಣಿಸಿಕೊಳ್ಳುತ್ತದೆ ?
   (ಇದು ಬರಿ ಬೆಳಗಲ್ಲೋ ಅಣ್ಣಾ, ಸುನಾಮಿಯ ಹಾಡು, ಬ್ಲೆನ್ ಹೀಮ್ ಕದನ, ಸುಗ್ಗಿ ಬರುತಿದೆ)

4. 'ಬಾರ್ಲೆ ಬಸ್ಯ, ನಿಮ್ಮಪ್ಪ ಹೇಳ್ದಂಗೆ ಬಂದ್ಬಿಡು' – ಹುಗ್ಗಿ ಕಥೆಯಲ್ಲಿ ಈ ಮಾತನ್ನು ಹೇಳಿದವರು ಯಾರು ?
   (ಸೊಚ್ಚ, ಗೌಡ, ಬಸವ, ಚಂದ್ರ)

**5 ರಿಂದ 10 ರವರೆಗಿನ ಪ್ರಶ್ನೆಗಳಲ್ಲಿ ಯಾವುದಾದರೂ ನಾಲ್ಕು ಪ್ರಶ್ನೆಗಳಿಗೆ ಸೂಚನೆಯಂತೆ ಉತ್ತರಿಸಿರಿ. (4 × 1 = 4)**

5. ಕೌರವರೊಳಗೆ – ಈ ಪದವನ್ನು ವಿಂಗಡಿಸಿ ಬರೆಯಿರಿ.

6. ಸುಂದರ – ಈ ಪದದ ಭಾವನಾಮ ರೂಪವನ್ನು ಬರೆಯಿರಿ.

7. ಅಸುರ – ಈ ಪದದ ಅರ್ಥವನ್ನು ಬರೆಯಿರಿ.

8. ಸ್ವರ್ಗ – ಈ ಪದದ ತದ್ಭವ ರೂಪವನ್ನು ಬರೆಯಿರಿ.

9. ಆಕಾಶ – ಈ ಪದಕ್ಕೆ ಎರಡು ಪರ್ಯಾಯ ಪದಗಳನ್ನು ಬರೆಯಿರಿ.

10. ಸಾಮಾನ್ಯ – ಈ ಪದದ ವಿರೋಧಾರ್ಥವನ್ನು ಬರೆಯಿರಿ.

**11 ರಿಂದ 18 ರವರೆಗಿನ ಪ್ರಶ್ನೆಗಳಲ್ಲಿ ಯಾವುದಾದರೂ ಐದು ಪ್ರಶ್ನೆಗಳಿಗೆ ಉತ್ತರಿಸಿರಿ.** **(5 × 2 = 10)**

11. ಕೆಳಗೆ ಕೊಡಲಾದ ಮಿಶ್ರವಾಕ್ಯವನ್ನು ಎರಡು ಸರಳ ವಾಕ್ಯಗಳಾಗಿ ಬರೆಯಿರಿ.

    ಸುತ್ತಮುತ್ತ ಒಂದರ ಮೇಲೆ ಮತ್ತೊಂದು ಒರಗಿರುವಂತಹ ಸಣ್ಣ ಬೆಟ್ಟಗಳ ನಡುವಣ ಕೊಲ್ಲಿ ಇದಾಗಿರುವುದರಿಂದ ಅಲೆಗಳ ಅಬ್ಬರವೂ ಇಲ್ಲ.

12. ಕಳ್ಳನೊಬ್ಬನು ಪೊಲೀಸರ ಕಣ್ಣಿಗೆ ಮಣ್ಣೆರಚಿ ಪರಾರಿಯಾದನು. ಅಡಿಗೆರೆ ಎಳೆದ ನುಡಿಗಟ್ಟನ್ನು ಬಳಸಿ ಇನ್ನೊಂದು ವಾಕ್ಯವನ್ನು ರಚಿಸಿರಿ.

13. ನಿದ್ದಿ, ಹೊಳೆದಂಡಿ, ಇದ್ಯ, ಕಂದಯ್ನ – ಈ ಪದಗಳನ್ನು ಶಿಷ್ಟಗನ್ನಡಕ್ಕೆ ಪರಿವರ್ತಿಸಿ ಬರೆಯಿರಿ.

14. ಈ ಕೆಳಗಿನ ವಾಕ್ಯಗಳಲ್ಲಿ ತದ್ಧಿತ ಪ್ರತ್ಯಯವಿರುವ ಪದಗಳನ್ನು ಗುರುತಿಸಿ ಬರೆಯಿರಿ.

    ಅ. ಬಳೆಗಾರನು ಹಳ್ಳಿಯೊಂದರಲ್ಲಿ ಬಳೆಯನ್ನು ಮಾರುತ್ತಿದ್ದನು.

    ಆ. ರಮೇಶನು ಬುದ್ಧಿವಂತ ವಿದ್ಯಾರ್ಥಿಯಾಗಿದ್ದನು.

15. ಯುದ್ಧವಿರೋಧಿ ಸಂದೇಶವನ್ನು ಸಾರುವ ಎರಡು ಘೋಷಣಾ ವಾಕ್ಯಗಳನ್ನು ಬರೆಯಿರಿ.

16. ಈ ಕೆಳಗಿನ ವಾಕ್ಯಗಳಲ್ಲಿರುವ ಅನ್ಯದೇಶೀಯ ಪದಗಳನ್ನು ಗುರುತಿಸಿ ಬರೆಯಿರಿ.

    ಅ. ಶಾಲೆಯ ಆವರಣ ಗೋಡೆಗೆ ನೋಟೀಸು ಹಚ್ಚುವುದನ್ನು ನಿಷೇಧಿಸಲಾಗಿದೆ.

    ಆ. ಆಹಾರ ಸೇವನೆಗಿಂತ ಮೊದಲು ಕೈಗಳನ್ನು ಸಾಬೂನು ಬಳಸಿ ಸ್ವಚ್ಛಗೊಳಿಸಬೇಕು.

17. ನಾವೀ ಪೊನ್ನಂ ಪೆಚ್ಚುಕೊಂಡು ಮನೆಯೊಳೆ ಸ್ವೇಚ್ಛೆಯಿಂದಿರ್ಪವರಲ್ಲಂ – ಈ ವಾಕ್ಯವನ್ನು ಹೊಸಗನ್ನಡಕ್ಕೆ ರೂಪಾಂತರಿಸಿ ಬರೆಯಿರಿ.

18. ‘ಇಲ್ಲ ನಾನ್ ಗೌಡ್ರ ಮನಿಯಾಗಿರೋದಿಲ್ಲ … ನಾನು ಬರ್ತೀನಿ ಊರ್ಗೆ’ – ಹುಗ್ಗಿ ಕತೆಯಲ್ಲಿ ಬರುವ ಈ ಮಾತಿನ ಸಂದರ್ಭವನ್ನು ತಿಳಿಸಿರಿ.

**19** ರಿಂದ **25** ರವರೆಗಿನ ಪ್ರಶ್ನೆಗಳಲ್ಲಿ ಯಾವುದಾದರೂ ನಾಲ್ಕು ಪ್ರಶ್ನೆಗಳಿಗೆ ಉತ್ತರಿಸಿರಿ. **(4 × 4 = 16)**

19. ಹೊಂದಿಸಿ ಬರೆಯಿರಿ.

| ಅ | ಆ |
|---|---|
| ಕಡಲ ಒಡಲು | ಫಕೀರ್ ಮಹಮ್ಮದ್ ಕಟ್ಪಾಡಿ |
| ಮೂಢನಂಬಿಕೆಗಳ ಬೀಡಿನಲ್ಲಿ | ಕುಂ. ವೀರಭದ್ರಪ್ಪ |
| ಒಸರು | ಭುವನೇಶ್ವರಿ ಹೆಗಡೆ |
| ಹುಗ್ಗಿ | ರಹಮತ್ ತರೀಕೆರೆ |

20. ಕೆಳಗೆ ನೀಡಲಾದ ಆಂಗ್ಲ ಗದ್ಯಭಾಗವನ್ನು ಕನ್ನಡಕ್ಕೆ ಭಾಷಾಂತರಿಸಿ.

The Mahabharata is a story about a great battle between the Kauravas and the Pandavas. The battle was fought in Kurukshetra near Delhi. Many kings and princes took part in the battle. The Pandavas defeated the Kauravas.

(Battle: ಯುದ್ಧ, Fought: ಹೋರಾಡು, Defeated: ಸೋಲಿಸಿದರು, Took Part: ಭಾಗವಹಿಸಿದ್ದರು)

21. ಕೆಳಗೆ ನೀಡಲಾದ ಜೀವನ ಚರಿತ್ರೆಯ ಭಾಗವನ್ನು ಆತ್ಮಕಥೆಯಾಗಿ ಪರಿವರ್ತಿಸಿ ಬರೆಯಿರಿ.

ಕನ್ನಡ ರಂಗಭೂಮಿಗೆ ಮಲವಳ್ಳಿ ಸುಂದರಮ್ಮನವರು ಪದಾರ್ಪಣ ಮಾಡಿ ಆರು ದಶಕಗಳು ಜಾರಿ ಹೋಗಿವೆ. ಈ ಆರು ದಶಕಗಳ ಬಣ್ಣದ ಬದುಕಿನಲ್ಲಿ ಅವರು ಅನೇಕ ಕಷ್ಟಗಳನ್ನು ಅನುಭವಿಸಿದ್ದಾರೆ. ರಂಗಭೂಮಿಯ ಏಳುಬೀಳುಗಳನ್ನು ಕಂಡಿದ್ದಾರೆ. ಎಷ್ಟೋ ವೇಳೆ ಅವರ ಬದುಕಿನಲ್ಲಿ ಎದುರಾದ ಕಹಿ ಪ್ರಸಂಗಗಳಿಂದಾಗಿ ಬಣ್ಣದ ಬದುಕಿಗೆ ವಿದಾಯ ಹೇಳಲು ತೀರ್ಮಾನಿಸಿದ್ದರೂ ಅದು ಸಾಧ್ಯವಾಗದೆ ಕಲಾಭಿಮಾನಿಗಳ ಒತ್ತಾಯಕ್ಕೆ ಮಣಿದು ಮತ್ತೆ ಬಣ್ಣದ ಬದುಕಿನಲ್ಲೇ ಸಫಲತೆಯತ್ತ ಸಾಗಿದ್ದಾರೆ.

22. ಅಂಡಮಾನಿನ ರೆಡ್ ಸ್ಕಿನ್ ಹವಳ ದ್ವೀಪದ ವೈಶಿಷ್ಟ್ಯಗಳನ್ನು ಟಿಪ್ಪಣಿ ರೂಪದಲ್ಲಿ ಬರೆಯಿರಿ.

23. ಕೆಳಗೆ ನೀಡಲಾದ ತ್ರಿಪದಿಯ ಆಶಯವನ್ನು ಬರೆಯಿರಿ.

ಆಚಾರಕರಸಾಗು ನೀತಿಗೆ ಪ್ರಭುವಾಗು
ಮಾತಿನಲಿ ಚೂಡಾಮಣಿಯಾಗು – ನನಕಂದ
ಜ್ಯೋತಿಯೇ ಆಗು ಜಗಕೆಲ್ಲ

24. ಕುಂಬಳಕಾಯಿಗೆ ಸಂಬಂಧಪಟ್ಟ ನಂಬಿಕೆಯ ಸನ್ನಿವೇಶವೊಂದನ್ನು ಮೂಢನಂಬಿಕೆಗಳ ಬೀಡಿನಲ್ಲಿ ಲೇಖನದಲ್ಲಿ ಹೇಳಲಾಗಿದೆ. ಅದರ ಸ್ವಾರಸ್ಯವನ್ನು ಬರೆಯಿರಿ.

25. ಶರಣದ ಕಾಯಕ ತತ್ವದಲ್ಲಿ ಆಸೆಗೆ ಸ್ಥಾನವಿಲ್ಲ ಎನ್ನುವುದನ್ನು ಆಯ್ದಕ್ಕಿ ಲಕ್ಕಮ್ಮ ತನ್ನ ವಚನದಲ್ಲಿ ಹೇಗೆ ಪ್ರತಿಪಾದಿಸಿದ್ದಾಳೆ ? ಸಂಕ್ಷಿಪ್ತವಾಗಿ ಬರೆಯಿರಿ.

**26** ರಿಂದ **32** ರವರೆಗಿನ ಪ್ರಶ್ನೆಗಳಲ್ಲಿ ಯಾವುದಾದರೂ ಐದು ಪ್ರಶ್ನೆಗಳಿಗೆ ಒಂದು ಪುಟಕ್ಕೆ ಕಡಿಮೆಯಾಗದಂತೆ ಉತ್ತರಿಸಿರಿ. **(5 × 6 = 30)**

26. ಸುನಾಮಿಯ ಹಾಡು ಕವನದ ಆಸ್ವಾದನಾ ಟಿಪ್ಪಣಿಯನ್ನು ಬರೆಯಿರಿ.

27. ನೀವು ಸಂದರ್ಶಿಸಿದ ಪ್ರವಾಸಿ ತಾಣವೊಂದರ ಕುರಿತಾಗಿರುವ ನಿಮ್ಮ ಅನುಭವಗಳನ್ನು ಲೇಖನ ರೂಪದಲ್ಲಿ ಬರೆಯಿರಿ.

28. ಕೊಳವೆ ಬಾವಿಯ ಅತಿಯಾದ ನಿರ್ಮಾಣದಿಂದ ಭೂಮಿಯ ಅಂತರ್ಜಲದ ಮಟ್ಟ ಕಡಿಮೆಯಾಗುತ್ತಿದೆ. ಆ ಕುರಿತು ಜನಜಾಗೃತಿ ಮೂಡಿಸುವ ಸಲುವಾಗಿ ಕರಪತ್ರವೊಂದನ್ನು ತಯಾರಿಸಿರಿ.

29. ಅಭಯರುಚಿ – ಅಭಯಮತಿ ಪರಸ್ಪರ ಸಂತೈಸಿಕೊಳ್ಳುವ ಸನ್ನಿವೇಶವನ್ನು 'ನಿರ್ಮಲ ಧರ್ಮದಿಂದೆ ಪಾಲಿಸು ಧರೆಯಂ' ಕಾವ್ಯಭಾಗದ ಹಿನ್ನೆಲೆಯಲ್ಲಿ ಸಂಗ್ರಹವಾಗಿ ಬರೆಯಿರಿ.

30. ತನ್ನ ಜನ್ಮ ವೃತ್ತಾಂತವನ್ನು ಅರಿತಾಗ ಕರ್ಣನಲ್ಲಿ ಉಂಟಾದ ಮಾನಸಿಕ ಸಂಘರ್ಷವನ್ನು 'ನಿನ್ನಯ ವೀರರೈವರ ನೋಯಿಸೆನು' ಕಾವ್ಯಭಾಗದ ಆಧಾರದಲ್ಲಿ ಬರೆಯಿರಿ.

31. ಕೆಳಗೆ ಕೊಡಲಾದ ಕಗ್ಗದ ಸಾಲುಗಳಲ್ಲಿ ವ್ಯಕ್ತವಾದ ಜೀವನ ಮೌಲ್ಯಗಳನ್ನು ವಿವರಿಸಿ ಬರೆಯಿರಿ.

    ಹುಲ್ಲಾಗು ಬೆಟ್ಟದಡಿ, ಮನೆಗೆ ಮಲ್ಲಿಗೆಯಾಗು
    ಕಲ್ಲಾಗು ಕಷ್ಟಗಳ ಮಳೆಯ ವಿಧಿ ಸುರಿಯೆ
    ಬೆಲ್ಲ ಸಕ್ಕರೆಯಾಗು ದೀನದುರ್ಬಲರಿಂಗೆ
    ಎಲ್ಲರೊಳಗೊಂದಾಗು ಮಂಕುತಿಮ್ಮ

32. ಬೆಳಗು ಕವನದ ಸೌಂದರ್ಯವನ್ನು ಡಾ. ಪ್ರಭುಶಂಕರ ಅವರು "ಇದು ಬರಿ ಬೆಳಗಲ್ಲೋ ಅಣ್ಣಾ" ರಸವಿಮರ್ಶೆಯಲ್ಲಿ ಹೇಗೆ ಸುಂದರವಾಗಿ ನಿರೂಪಿಸಿದ್ದಾರೆ ? ವಿವರಿಸಿ ಬರೆಯಿರಿ.

**33** ರಿಂದ **35** ರವರೆಗಿನ ಪ್ರಶ್ನೆಗಳಲ್ಲಿ ಯಾವುದಾದರೂ ಎರಡು ಪ್ರಶ್ನೆಗಳಿಗೆ ಒಂದೂವರೆ ಪುಟಕ್ಕೆ ಕಡಿಮೆಯಾಗದಂತೆ ಉತ್ತರಿಸಿರಿ. **(2 × 8 = 16)**

33. ಧರ್ಮಬುದ್ಧಿ, ದುಷ್ಟಬುದ್ಧಿ ಪಾತ್ರಗಳ ಗುಣಸ್ವಭಾವಗಳನ್ನು ಪರಸ್ಪರ ಹೋಲಿಸಿ ಪಾತ್ರಚಿತ್ರಣವನ್ನು ಮಾಡಿರಿ.

34. ಸುಗ್ಗಿಯ ಕಾಲದ ಪ್ರಕೃತಿಯ ಸೊಬಗು 'ಸುಗ್ಗಿ ಬರುತಿದೆ' ಕವನದಲ್ಲಿ ಹೇಗೆ ಮೂಡಿ ಬಂದಿದೆ ? ವಿವರಿಸಿ ಬರೆಯಿರಿ.

35. 'ಹುಗ್ಗಿ' ಕಥೆಯಲ್ಲಿ ಹಸಿವೆಯ ಘೋರ ಚಿತ್ರಣ ಹೇಗೆ ಮೂಡಿ ಬಂದಿದೆ ? ವಿವರಿಸಿ ಬರೆಯಿರಿ.